ಬೀಡುಬಿಟ್ಟು ಹೋಗುವುದಿಲ್ಲ ಗೊತ್ತೇನು? ಊಹೂಂ, ಗೊತ್ತಿಲ್ಲ. ಯಾಕೆಂದರೆ ಅದರ ಮೈಯಲಡಗಿರುವ ಒಂದೊಂದು ಹೂಗಳ ಪಕಳೆಯನ್ನೂ ಮಾಂಸದ ರುಚಿಕಂಡ ಜನ ಕಿತ್ತುಬಿಡುತ್ತಾರೆ. ಹೌದಾ? ಅಯ್ಯೋ, ಪಾಪ! ಅದನ್ನು ರಕ್ಷಿಸುವವರು ಯಾರೂ ಇರೋಲ್ವ? ಇಲ್ಲ. ಅದೂ ಕೂಡ ಕಾಡುಬಿಟ್ಟು ಹೋಗಿ ರಸ್ತೆ ದಾಟುವ ಅನಿವಾರ್ಯ ಬಂದೇ ಬರುತ್ತದೆ. ರಸ್ತೆಯಲ್ಲಿ ನೂರಾರು ಬಿಯದರು. ಇಲ್ಲಿ – ಜನ. ಗಜಿಬಿಜಿ. ಕಾಡುಹೊಗೆ – ರಸ್ತೆದಾಟಲಾಗದೆ ಯಾವುದೋ ಸೆಳೆತಕ್ಕೆ ಸಿಕ್ಕು ನಿಂತಿರುವ ಜಿಂಕೆ... ಅಪರಿಚಿತ ಎದುರಿಗೆ. ಅವನ ನಮಸ್ಕಾರಕ್ಕೆ ಮರುತ್ತರಿಸದೆ ಸುಮ್ಮನೆ ನಿಂತೆ. ಮುಖ ಮತ್ತೊಂದೆಡೆ ತಿರುಗಿಸಿದೆ. ಅವ ಮತ್ತೆ ಕೈಹೊಸೆದು ಹೇಳಿದ– ನಮಸ್ಕಾರ ಮೇಡಂ... ನೀವು ಫೋಟೊದಲ್ಲಿರುವ ಹಾಗಿಲ್ಲವಲ್ಲ? ಎದುರಿಗೇ ಹೆಚ್ಚು ಚೆಂದವಾಗಿದ್ದೀರ. ಆದರೆ... ಈ ಕ್ಷಣಕ್ಕೆ ನಾನು ನಿಮ್ಮ ಮುಖ ನೋಡಿರದಿದ್ದರೆ, ನೀವು ಸಿಕ್ಕಿರದಿದ್ದರೆ ನಾನು, ಈಗ ಹೋಯಿತಲ್ಲ, ಆ ಲಾರಿಯ ಕೆಳಗೆ ಬಿದ್ದು ಸಾಯುವವನಿದ್ದೆ! ಆದರೆ, ಯೋಗಾಯೋಗ, ನೀವು ಸಿಕ್ಕಿರಿ!

ಏನಿದು? ನನ್ನ ಬಗ್ಗೆ ಗೊತ್ತಿರುವ ಹಾಗಿದೆ. ಭಯವಾಯಿತು. ನನ್ನ ಹೆಸರು ಹೇಳುವಾಗ ಅವನ ಕಂಗಳು ಹೆಚ್ಚು ಕಡಿಮೆ ನೀರು ತುಂಬಿಕೊಂಡಷ್ಟು ಭಾವುಕವಾಗಿ. ಆತ ಗದ್ಗದಿತನಾದದ್ದು ಕಂಡು ಖುಷಿಯಾಯಿತು. ಆದರೆ ಸಾಯುವ ಕುರಿತು ನಾನು ಆಡಬೇಕಾದ ಮಾತನ್ನು ಅವನೂ ಹೇಳುತ್ತಿದ್ದಾನೆ... ಇದೇನು... ಭೇಟಿಯಲ್ಲಷ್ಟೇ ಅಲ್ಲ, ಸಾವು ಬದುಕಿನಲ್ಲಷ್ಟೇ ಅಲ್ಲ, ಒಂದೇ ಮಾತು, ಒಂದೇ ಆಲೋಚನೆ, ನಿರ್ಧಾರವೂ ಒಂದೇ! ಇಲ್ಲೂ ಯೋಗಾಯೋಗವೇ?! ಅಯ್ಯೋ, ಮಗುವೇ... ಸಾಂತ್ವನ ಮಾಡಬೇಕೆನಿಸಿತು. ನಾನದನ್ನು ಅವನಿಂದ ಬಯಸಿದ್ದರೂ! ಆದರೆ ನನಗವ ಅಪರಿಚಿತ. ನನಗವ ಅನಾಮಿಕ! ಆದರೂ... ಬದುಕನ್ನು ಬಾಚಿತಬ್ಬುವ ಹುಮ್ಮಸ್ಸಿನ ನನ್ನಂಥವಳಿಗೂ ಪರಿಚಿತರು, ನಿರ್ದಿಷ್ಟ ಹೆಸರುಗಳ ಹೊತ್ತವರು ಸಾವಿನಕೂಪಕ್ಕೆ ತಳ್ಳಬಹುದಾದರೆ – ಹೆಸರು, ದೆಸೆ ಗುರಿಯಿಲ್ಲದ ಅಪರಿಚಿತರ ಲೋಕವೇ ಎಷ್ಟೋ ಸುಂದರವೆನಿಸಿತು–ಒಂದು ಚಣ.

ರಸ್ತೆ ದಾಟಿ ಎಂದು ಬೆಳಕುದೀಪ ಹಸಿರು ಝಗ್ಗನೆ ಉರಿದು; ಸಂದಣಿ ಈ ತುದಿಯಿಂದ ರಸ್ತೆಯ ಆ ತುದಿಗೆ ನೆಗೆಯಿತು. ವಾಹನಗಳ ಕರ್ಕಶ ದನಿ. ಶುಕ್ರವಾರದ ಅಪರಾಹ್ನದ ಜುಮ್ಮಾ ಮಸೀದಿಯ ಮುಲ್ಲಾನ ನಮಾಜಿನ ಕೂಗು. ನಮ್ಮ ಪಕ್ಕದಲ್ಲೇ ಸರ್ರನೆ ಹಾದುಹೋದ ಆಟೊರಿಕ್ಷಾದಲ್ಲಿದ್ದ ಮೈಕ್‌ನಿಂದ ಮಂತ್ರಗಳ ಶೈಲಿಯಲ್ಲಿ ಚುನಾವಣೆ ಪ್ರಚಾರದ ಆರ್ಭಟ. ಅರೆ! ಈ ಹುಡುಗ ಮಾತ್ರ ಈ ಲೋಕದ ಪರಿವೆಯಿಲ್ಲದೆ, ಸಾಯಲು ಬಂದಿದ್ದರೂ ನೆರಿಗೆಗೆಡದಂಥ ನನ್ನ ಸೀರೆಯ ಚೆಂದ, ನನ್ನ ಕಣ್ಣಿನ ಸೊಬಗು, ಹುಬ್ಬಿನ ಮಾಟ, ಹಣೆಗಿಟ್ಟ ಹುರಿಮಂಜಿನ ಅಗಲ ಕುಂಕುಮ – ಇವನ್ನೇ ಖಬರುಹಾರಿ ನೋಡುತ್ತ ನಿಂತಿದ್ದಾನೆ. ಹೀಗೇ – ಒಬ್ಬರನ್ನು ಮೈಮರೆಸುತ್ತ ನಿಲ್ಲಬಲ್ಲವರಾದರೆ, ಉಕ್ಕಂದವನ್ನುಕ್ಕಿಸಬಲ್ಲೆನಾದರೆ ಬದುಕುವುದಕ್ಕೆ ಇದಕ್ಕೂ ಹೆಚ್ಚಿನ ಕಾರಣವೇನು ಬೇಕು? ಸಾಯಲು ಹೊರಟಿದ್ದೆನಲ್ಲ? ನನ್ನ ಬಗೆಗೆ ನನಗೇ ನಾಚಿಕೆಯಾಯ್ತು. ಈ ಹುಡುಗ ಬೀಳಬೇಕೆಂದಿದ್ದ ಲಾರಿಯ ಕೆಳಗೇ ನಾನೂ ಬೀಳಲು ನಿರ್ಧರಿಸಿದ್ದು. ಆದರೆ ಹಾಗೆ ಹೊರಟ ಕಡೆ ನಿಮಿಷದವರೆಗೂ ಯಾರಾದರೂ ಬದುಕಿಸಬಾರದೆ ನನ್ನನ್ನು ಎನ್ನಿಸಿದ್ದೂ ಅಷ್ಟೇ ನಿಜ.

ಆಗ ಬಂದವನೀತ – ದೇವದೂತ. ಅಥವಾ ನಾನವನಿಗೆ ದೇವದೂತೆ – ದೇವತೆ. ನನ್ನಲ್ಲಿನ್ನೂ ಒಬ್ಬರನ್ನುಳಿಸಬಲ್ಲ ಚೇತನವಿದೆಯೆಂದೆನ್ನಿಸಿದಾಗ ಬದುಕೆಷ್ಟು ಸುಂದರ – ನಾನು ಧನ್ಯೆ